ಕಥೆ

# ಬೆಟ್ಟದ ಕಲ್ಲು



ನಾಗರೇಖಾ ಗಾಂವಕರ

ಕಲೆ: ವಿ.ಎಂ. ಮಂಜುನಾಥ್

ಅಂಗಡಿಬೈಲಿನ ಮೇನ್‌ರೋಡಿನಿಂದ ನಡೆದರೆ ಸುಮಾರು ಮೂರು ಫರ್ಲಾಂಗಿಗೆ ಈ ಕಂಚಿನಬೈಲು ಬರುತ್ತದೆ. ದಾರಿಯ ಎರಡೂ ಬದಿಯಲ್ಲಿ ಹಬ್ಬಿರುವ ಗಿಡಗಂಟಿಗಳು, ಗೇರುಗಿಡಗಳು, ಹೆಚ್ಚು ಕಡಿಮೆ ಅರ್ಧ ಮೈಲಿಗೊಂದು ಮಾವಿನಮರಗಳೂ ಕಂಡೇ ಕಾಣುತ್ತವೆ. ರಸ್ತೆಗುಂಟ ನೇರ ಹೋದರೆ ಕೋಮಾರಪಂಥರ ಕೇರಿ. ಕೊನೆಯ ಮನೆ ಬೀರನದು. ಬೀರನ ಮನೆಗೆ ಹೋಗುವ ದಾರಿಯಲ್ಲೇ ಸ್ವಲ್ಪ ಹಿಂದೆ ಎಡಕ್ಕೆ ತಿರುಗಿ ಮತ್ತೆ ನೇರ ಹತ್ತು ಹೆಜ್ಜೆ ನಡೆದರೆ ಬೀರದೇವರ ಗುಡಿಗೆ ಹೋಗುವ ಬೆಟ್ಟದಬುಡ ಸಿಗುತ್ತದೆ. ಅರ್ಧಮಟ್ಟದ ಬೆಟ್ಟದ ಮೇಲೆ ರಸ್ತೆಯ ನೇರಕ್ಕೆ ಗುಡಿ ಇದೆ. ಗುಡಿ ಮುಟ್ಟಲು ನಲವತ್ತು ಮೆಟ್ಟಿಲುಗಳನ್ನಾದರೂ ಹತ್ತಬೇಕು. ಕುಟಾರೆ, ಪಿಕಾಸುಗಳಿಂದಲೇ ಮಣ್ಣು ತೆಗೆದು ಕಲ್ಲುಚಪ್ಪಡಿ ಹಾಸಿ ಮಾಡಿದ ಮೆಟ್ಟಿಲುಗಳು. ಹತ್ತಲು ಇಳಿಯಲು ಅಂತಹ ತ್ರಾಸಿಲ್ಲ. ಎತ್ತರದ ಗುಡ್ಡದ ಮೇಲೆ ಪುಟ್ಟ ಗುಡಿಯಲ್ಲಿ ದೊಡ್ಡ ಹುತ್ತದ ಬುಡಕ್ಕೆ ನಿಂತ ಭಂಗಿಯ ಬೀರದೇವರ ಮೂರ್ತಿ. ಉಗ್ರರೂಪಿ ಎಂದರೂ ಮುಖದಲ್ಲಿ ಒಂದೆಳೆಯಾಗಿ ನುಸುಳಿದ ಪ್ರಸನ್ನತೆಯ ಕಳೆಯೂ ಕೂಡಿ ಬೀರದೇವರ ಕಂಡರೆ ಅದೆಂಥದೋ ನೆಮ್ಮದಿ, ಆನಂದ ತಾನಾಗಿಯೇ ಭಕ್ತರಲ್ಲಿ ಜಾಗೃತವಾಗುತ್ತದೆ. ಕಾರ್ಣಿಕಕ್ಕೆ ಹೆಸರಾದ ದೇವರು. ಊರಿನ ಎಲ್ಲರೂ ಹೆಚ್ಚು ಕಮ್ಮಿ ಆ ದೇವರಿಗೆ ನಡೆದುಕೊಳ್ಳುತ್ತಾರೆ. ಹಾಗಾಗಿ ಊರಿನಲ್ಲಿ ಬೀರ ಎಂದು ಮಕ್ಕಳಿಗೆ ಹೆಸರಿಡುವುದು ಸಾಮಾನ್ಯ. ಆ ಊರಲ್ಲಿ ಬೀರು ಹೆಸರಿನ ಮರ್‍ನಾಲ್ಕು ಜನವಾದರೂ ಇದ್ದಾರೆ. ಬೀರು ಕುಸ್ಲು, ಬೀರು ಗೌಡ, ಬೀರಾ ಬೊಮ್ಮಯ್ಯ ನಾಯಕ, ಬೀರು ನಾಗೇಂದ್ರ ನಾಯ್ಕ ಇಂತಹ ಹೆಸರುಗಳಿಂದ ಊರಲ್ಲಿರುವ ಜಾತಿಗಳ ಪೂರ್ವಾಪರ ಕೂಡಾ ತಿಳೀಬಹುದು.

'ಯಾರ ಕಡದದ್ರೋ ಏನೊ, ಇಟ್ ಚಂದಿವ್ನೆ ನಮ್ಮ ಬೀರ ದ್ಯಾವ್ರು' ಎನ್ನುವ ಹೆಣ್ಣುಮಕ್ಕಳ ಮನಮುಟ್ಟುವ ಭಕ್ತಿ ಆ ದೇವರಲ್ಲಿ ಯಾವತ್ತೂ ಕಮ್ಮಿಯಾಗಿಲ್ಲ. ದೇವರ ಗುಡಿ ಹಿಂಭಾಗದಲ್ಲಿಯ ದಟ್ಟ ಕಾನು. ಎಡಕ್ಕೂ ಬಲಕ್ಕೂ ವಿಸ್ತಾರವಾಗಿ ಹಬ್ಬಿದೆ. ಬಲಗಡೆಯ ಗುಡ್ಡದ ಬುಡದಲ್ಲಿ ಬೇಸಿಗೆಯಲ್ಲಿ ಮಾತ್ರ ಬತ್ತುವ ದೊಡ್ಡ ಕೆರೆ. ಕೆರೆಯ ಕೆಳಭಾಗದಲ್ಲಿ ಮನೆಗಳ ಸಾಲು. ಆಗಾಗ ಹೆಂಗಸರು ಕೊತ್ತಲಚೀಲ(ಸಣಬಿನ ಚೀಲ), ಕಾಲೊರೆಸುವ ಬಟ್ಟೆ ಇವುಗಳನ್ನೆಲ್ಲಾ ಕೆರೆಗೆ ಹೋಗಿ ತೊಳೆದು ತರುತ್ತಾರೆ. ದನಕರುಗಳ ಮೈತೊಳೆಯಲು ಮಾತ್ರವಲ್ಲ, ಊರಿನ ಚೌತಿ ಗಣಪತಿಯ ವಿಸರ್ಜನೆಯೂ ಇಲ್ಲೇ ಆಗುತ್ತದೆ. ಮಳೆಗಾಲ ಮುಗಿಯಿತೆಂದರೆ ಈ ಕೆರೆಯಿಂದಲೇ ಮನೆಯ ಹಿತ್ತಲ ತೆಂಗಿನಗಿಡಗಳಿಗೆ ನೀರು ಬಿಟ್ಟುಕೊಳ್ಳುವುದು. ದಿನಕ್ಕೆ ಎರಡು, ಮೂರು ಮನೆಗಳ ಹಿತ್ತಲಕ್ಕೆ ಸರದಿಯಂತೆ ಬಿಟ್ಟುಕೊಳ್ಳುವುದು.